# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 284 (343) |
| ಉತ್ತರಿಸಬೇಕಾದ ದಿನಾಂಕ | : | 19.08.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಜೀವನ್ ಮಿಷನ್ ಹಾಗೂ ಹರ್ ಘರ್ ಜಲ ಯೋಜನೆಯ ಉದ್ದೇಶವೇನು; ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; ಹಾಗೂ ಯಾವ ಕಾಲಮಿತಿಯೊಳಗೆ ಸದರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದು; (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯು 15 ಆಗಸ್ಟ್ 2019 ರಂದು ಜಾರಿಗೆ ಬಂದಿದ್ದು, ಸದರಿ ಕಾರ್ಯಕ್ರಮದಡಿ 2024ರೊಳಗಾಗಿ ರಾಜ್ಯದ ಎಲ್ಲಾ ಗ್ರಾಮೀಣ ಮನೆಗಳಿಗೆ 55 LPCD ಯಂತೆ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕ ಮೂಲಕ ಸಮುದಾಯದ ಸಹಭಾಗಿತ್ವದೊಂದಿಗೆ ಒದಗಿಸುವ ಉದ್ದೇಶ ಹೊಂದಲಾಗಿರುತ್ತದೆ.<br>ಕೇಂದ್ರ ಸರ್ಕಾರದ 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಜಲ ಜೀವನ್ ಮಿಷನ್ ಯೋಜನೆಯನ್ನು ಡಿಸೆಂಬರ್ 2028ರವರೆಗೆ ವಿಸ್ತರಿಸಲಾಗಿರುತ್ತದೆ.<br>ಹರ್ ಘರ್ ಜಲ್ ಎನ್ನುವುದು ಗ್ರಾಮದಲ್ಲಿ ಯೋಜನೆಯು ಪೂರ್ಣಗೊಂಡಿರುವುದನ್ನು ಘೋಷಿಸುವ ಪ್ರಕ್ರಿಯೆಯಾಗಿದ್ದು, ಅಕ್ಟೋಬರ್-2021 ರಂದು ಪ್ರಾರಂಭಿಸಲಾಗಿದೆ. ಸದರಿ ಕಾರ್ಯಕ್ರಮದಡಿ ಶೇ.100ರಷ್ಟು ನಳ ಸಂಪರ್ಕ ಹೊಂದಿರುವ ಗ್ರಾಮಗಳನ್ನು ಹರ್ ಘರ್ ಜಲ್ ಎಂದು ಗ್ರಾಮಮಟ್ಟದ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ (VWSC) ರವರಿಂದ ಘೋಷಿಸಲಾಗುತ್ತದೆ ಹಾಗೂ ಮುಂದಿನ ನಿರ್ವಹಣೆಗಾಗಿ ಗ್ರಾಮ ಪಂಚಾಯತಿಗೆ ಹಸ್ತಾಂತರ ಮಾಡಲಾಗುತ್ತದೆ. |

| | | |
|---|---|---|
| ಆ) | ಈ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನವೆಷ್ಟು: (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಗಾಗಿ ಪ್ರಾರಂಭದಿಂದ ಈವರೆಗೂ ಕೇಂದ್ರದಿಂದ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಗೊಳಿಸಿರುವ ಅನುದಾನದ ವರ್ಷವಾರು ಮಾಹಿತಿ **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| ಇ) | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಸರ್ಕಾರವು ಎದುರಿಸುತ್ತಿರುವ ಸಮಸ್ಯೆಗಳು ಯಾವುವು; ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಮಾಡಲು ಗ್ರಾಕುನೀ&ನೈ ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.<br>1. ರಾಜ್ಯವು ದೇಶದ 2ನೇ ಅತೀ ಶುಷ್ಕ ಪ್ರದೇಶವಾಗಿದ್ದು, ಸುಸ್ಥಿರ ಜಲಮೂಲವನ್ನು ಗುರುತಿಸಲು ಹೆಚ್ಚಿನ ಸಮಯಾವಕಾಶ ತೆಗೆದುಕೊಳ್ಳಲಾಗಿದೆ.<br>2. ಬಹುಗ್ರಾಮ ಕುಡಿಯುವ ನೀರಿನ ಮೇಲೆ ಅವಲಂಬಿತವಾಗಿರುವ ಏಕ ಗ್ರಾಮ ಯೋಜನೆಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಬಹುಗ್ರಾಮ ಯೋಜನೆ ಪೂರ್ಣಗೊಳ್ಳುವರೆಗೆ ಹಾಲಿ ಲಭ್ಯವಿರುವ ಸ್ಥಳೀಯ ಮೂಲದಿಂದ ನೀರು ಸರಬರಾಜು ಮಾಡಲಾಗುತ್ತಿದೆ.<br>3. ಯೋಜನೆಯ ಗಾತ್ರಗಳಿಗೆ ಅನುಗುಣವಾಗಿ ಏಕ ಗ್ರಾಮ ಯೋಜನೆ (SVS)ಗಳಿಗೆ 6 ರಿಂದ 9 ತಿಂಗಳುಗಳಷ್ಟು ಹಾಗೂ ಬಹುಗ್ರಾಮ ಯೋಜನೆ (MVS)ಗಳಿಗೆ 11 ರಿಂದ 36 ತಿಂಗಳುಗಳಷ್ಟು ಅನುಷ್ಠಾನ ಸಮಯ ನಿಗದಿ ಪಡಿಸಲಾಗಿರುತ್ತದೆ. ಸದರಿ ಯೋಜನೆಗಳ ಅನುಷ್ಠಾನದಲ್ಲಿ ನಿವೇಶನ/ಜಾಗಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಇಲಾಖೆ/ ಪ್ರಾಧಿಕಾರ ಅಥವಾ ಖಾಸಗಿ ವ್ಯಕ್ತಿಗಳಿಂದ ಖರೀದಿಸಬೇಕಾಗಿರುತ್ತದೆ. ಆದುದರಿಂದ ಹೆಚ್ಚಿನ ಸಮಯಾವಾಕಾಶ ತೆಗೆದುಕೊಳ್ಳಲಾಗುತ್ತಿದೆ.<br>4. (i) ಅರಣ್ಯ ಇಲಾಖೆಯ ಜಾಗಗಳನ್ನು (ಸಂರಕ್ಷಿತ ಅರಣ್ಯ ವಲಯ, ಸಾಮಾಜಿಕ ಅರಣ್ಯ ವಲಯ, |

| | | |
|---|---|---|
| | | ವನ್ಯ ಜೀವಿ ಅರಣ್ಯ ವಲಯ) ಪಡೆಯಲು ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮತಿ ಪಡೆಯುವ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ.<br>(ii) ರೈಲ್ವೇ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಲೋಕೋಪಯೋಗಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸ್ವತ್ತುಗಳ, ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯಬೇಕಿರುತ್ತದೆ.<br>(iii) ಜಾಕ್ ವೆಲ್ ನಿರ್ಮಾಣ ಸ್ಥಳಗಳ ತೀರುವಳಿಗೆ ಸಂಬಂಧಿಸಿದ ನಿಗಮ / ಇಲಾಖೆಗಳಿಂದ ಸಹಮತಿ ಪಡೆಯುವುದು.<br>(iv) ಖಾಸಗಿ ನಿವೇಶನಗಳನ್ನು ಗುತ್ತಿಗೆದಾರರು ಖರೀದಿಸಬೇಕಾಗಿರುವುದು ಹಾಗೂ ಸಂಬಂಧಿತ ಹಕ್ಕು ದಾಖಲೆ ಪಡೆಯಲು ವಿಳಂಬ.<br><br>ರಾಜ್ಯವು ಅತೀ ಶುಷ್ಕ ಪ್ರದೇಶವಾಗಿರುವುದರಿಂದ ಬಹುತೇಕವಾಗಿ ಅಂತರ್ಜಲವನ್ನು ಜಲಮೂಲವನ್ನಾಗಿ ಅವಲಂಬಿಸಿರುತ್ತದೆ. ಜಲ ಜೀವನ್ ಮಿಷನ್ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಸುಸ್ಥಿರ ಜಲಮೂಲಗಳಾದ ಪ್ರಮುಖ ನದಿಗಳನ್ನು ಹಾಗೂ ಜಲಾಶಯಗಳನ್ನು ಜಲಮೂಲಗಳನ್ನಾಗಿ ಪರಿಗಣಿಸಲಾಗಿರುತ್ತದೆ.<br>ರಾಜ್ಯದಲ್ಲಿ ಏಕಗ್ರಾಮ ಹಾಗೂ ಬಹುಗ್ರಾಮ ಯೋಜನೆಗಳನ್ನು ಏಕಕಾಲಕ್ಕೆ ಪ್ರಾರಂಭಿಸಲಾಗಿದ್ದು, ಬಹುಗ್ರಾಮ ಅವಲಂಬಿತ ಬಹುತೇಕ ಏಕಗ್ರಾಮ ಯೋಜನೆಗಳು ಭೌತಿಕವಾಗಿ ಮೊದಲು ಪೂರ್ಣಗೊಂಡಿದ್ದರೂ, ಗ್ರಾಮಗಳಲ್ಲಿ ಲಭ್ಯವಿರುವ ಕೊಳವೆ ಬಾವಿಗಳಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಸದರಿ ಗ್ರಾಮಗಳಿಗೆ ಸಂಬಂಧಿಸಿದ ಬಹುಗ್ರಾಮ ಯೋಜನೆಯು ಪೂರ್ಣಗೊಂಡ ನಂತರ |

| | | |
|---|---|---|
| | | ಶಾಶ್ವತವಾಗಿ ಪೂರ್ಣಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರನ್ನು ಕಾರ್ಯಾತ್ಮಕ ನಳ ಸಂಪರ್ಕಗಳ ಮೂಲಕ ಒದಗಿಸಲಾಗುತ್ತದೆ.<br>ರಾಜ್ಯದಲ್ಲಿ ಬಹುತೇಕ ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು DBOT ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಗುತ್ತಿಗೆಯಡಿ ಯೋಜನೆಗೆ ಅಗತ್ಯವಿರುವ ನಿವೇಶನಗಳ ಅನುಮತಿಯನ್ನು ವಿವಿಧ ಇಲಾಖೆ / ಸಂಸ್ಥೆಯಿಂದ ಪಡೆಯುವುದು ಸಂಬಂಧಪಟ್ಟ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಆದಾಗ್ಯೂ, ಇಲಾಖೆಯು ಜಿಲ್ಲಾ ಮತ್ತು ರಾಜ್ಯದ ಹಂತದಲ್ಲಿ ಇಲಾಖೆ / ಸಂಸ್ಥೆಗಳೊಂದಿಗೆ ಕಾಲ ಕಾಲಕ್ಕೆ ಉನ್ನತ್ತ ಮಟ್ಟದ ಸಭೆಗಳನ್ನು ನಡೆಸಿ ಶೀಘ್ರ ಅನುಮತಿ ಪಡೆಯಲು ಕ್ರಮಕೈಗೊಳ್ಳಲಾಗುತ್ತಿದೆ. |
| ಈ) | ಜೆ.ಜೆ.ಎಂ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಉಪಗುತ್ತಿಗೆ ನೀಡಲು ಅವಕಾಶ ಕಲ್ಪಿಸಿರುವುದಿಲ್ಲವಾದರೂ, ಉಪಗುತ್ತಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಉಪಗುತ್ತಿಗೆ ನೀಡಿರುವವರ ವಿರುದ್ಧ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ ಯೋಜನೆಯಡಿ 2 ಭಾಗಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು DBOT ಆಧಾರದ ಮೇಲೆ, ಸಗಟು ನೀರು ಸರಬರಾಜಿಗೆ ಅನುಷ್ಠಾನಗೊಳಿಸಲಾಗುತ್ತಿದೆ.<br>2. ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಒದಗಿಸುವ ಕಾಮಗಾರಿಗಳನ್ನು ಐಟಂ ದರಗಳ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗುತ್ತಿದೆ.<br>ಅ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ DBOT ಆಧಾರದಲ್ಲಿ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಟೆಂಡರ್ ನಲ್ಲಿಯೇ Electrical ಮತ್ತು SCADA ಘಟಕಗಳಿಗೆ ಉಪಗುತ್ತಿಗೆಯನ್ನು ನೀಡಲು ಟೆಂಡರ್‌ನ Clause 3.2 (e) ಮತ್ತು 3.2 (f) ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಉಪಗುತ್ತಿಗೆದಾರರ ಮಾಹಿತಿಯನ್ನು ಪರಿಶೀಲಿಸಿ ಟೆಂಡರ್ ಅನ್ನು ಅನುಮೋದಿಸಲಾಗುತ್ತಿದೆ.<br>ಆ) ಗ್ರಾಮಾಂತರದ ನೀರು ಸರಬರಾಜು ಮತ್ತು ನಳ ಸಂಪರ್ಕ ಕಾಮಗಾರಿಗಳನ್ನು ಐಟಂ ದರಗಳ ಆಧಾರದ |

| | | |
|---|---|---|
| | | ಮೇಲೆ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಈ ಕಾಮಗಾರಿಗಳಲ್ಲಿ ಯಾವುದೇ ಉಪಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.<br>ಆದಾಗ್ಯೂ, ಉಪಗುತ್ತಿಗೆ ನೀಡಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಗುತ್ತಿಗೆಯನ್ನು ರದ್ದುಪಡಿಸಿ, ಕಪ್ಪುಪಟ್ಟಿಗೆ ಸೇರಿಸಲು ಮತ್ತು ಅವರ ವಿರುದ್ಧ ಕಾನೂನು ಕ್ರಮ ಕ್ರಮಕೈಗೊಳ್ಳಲಾಗುವುದು. |
| ಉ) | ಜಲ ಜೀವನ್ ಮಿಷನ್ ಯೋಜನೆಯಡಿ ರಾಜ್ಯದ ಗ್ರಾಮೀಣ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳುವಾಗ ಅಗತ್ಯ ಅಂಶಗಳನ್ನು ಪಾಲಿಸಲು ಹಾಗೂ ಗುಣಮಟ್ಟವನ್ನು ಕಾಯ್ದುಕೊಳ್ಳುವ ಕುರಿತು ಸರ್ಕಾರ ಆದೇಶಿಸಿದ್ದರೂ ಸಹ ಅಗತ್ಯ ಅಂಶಗಳನ್ನು ಪಾಲಿಸದೇ ಮತ್ತು ಕಳಪೆ ಕಾಮಗಾರಿಯನ್ನು ಮಾಡಿರುವವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಜಲ ಜೀವನ್ ಮಿಷನ್ (JJM) ಅನುಷ್ಠಾನದಲ್ಲಿ ಕಾಮಗಾರಿಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯೋಜನೆಯಲ್ಲಿ ಬಳಸುವ ಎಲ್ಲಾ HDPE ಪೈಪ್ ಗಳನ್ನು M/S Central Institute of Petrochemicals Engineering & Technology (CIPET) ಸಂಸ್ಥೆಯ ಪ್ರಯೋಗಾಲಯದಲ್ಲಿ ಅಗತ್ಯವಿರುವ ಗುಣಮಟ್ಟಗಳನ್ನು ಪರೀಕ್ಷಿಸಿ ಖಚಿತಪಡಿಸಿದ ನಂತರವೇ, ಕಾಮಗಾರಿಗಳಲ್ಲಿ ಉಪಯೋಗಿಸಲಾಗಿರುತ್ತದೆ ಹಾಗೂ ರಾಜ್ಯ ಮಟ್ಟದ 3rd Party Agency ಯಿಂದಲೂ ಸದರಿ ಗ್ರಾಮಗಳಲ್ಲಿನ ಕಾಮಗಾರಿ ಪರಿಶೀಲನೆ ನಡೆಸುತ್ತಿದ್ದು, ಸದರಿಯವರ ವರದಿಯಲ್ಲಿ ನ್ಯೂನ್ಯತೆಗಳು ಕಂಡುಬಂದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಕಾಮಗಾರಿಗಳಲ್ಲಿನ ಗುತ್ತಿಗೆದಾರರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಲಾಗುತ್ತಿದೆ. ಸಂಪೂರ್ಣವಾದ ವಿವರವನ್ನು **ಅನುಬಂಧ-02 ರಲ್ಲಿ** ಲಗತ್ತಿಸಿದೆ. |

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/217/2026-27

**(ಈಶ್ವರ್ ಖಂಡ್ರೆ)**,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಸಚಿವರು.

**ಅನುಬಂಧ -01**

**ಜಲ ಜೀವನ್ ಮಿಷನ್ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ**

(ರೂ. ಕೋಟಿಗಳಲ್ಲಿ)

| ಕ್ರ.ಸಂ | ವರ್ಷ | ಹಂಚಿಕೆ | | | ಆರಂಭಿಕ ಶಿಲ್ಕು | | | ಬಿಡುಗಡೆ | | | ಒಟ್ಟು (ಆರಂಭಿಕ ಶಿಲ್ಕು+ ಬಿಡುಗಡೆ) | | | ವೆಚ್ಚ | | |
|---|---|---|---|---|---|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 1 | 2019-20 | 546.06 | 353.94 | 900.00 | 26.61 | 170.51 | 197.12 | 546.06 | 333.01 | 879.07 | 572.66 | 503.52 | 1076.18 | 491.35 | 298.64 | 789.99 |
| 2 | 2020-21 | 1189.40 | 566.17 | 1755.58 | 81.31 | 204.89 | 286.20 | 446.36 | 566.17 | 1012.53 | 527.67 | 771.06 | 1298.72 | 349.62 | 431.40 | 781.01 |
| 3 | 2021-22 | 5008.80 | 3345.45 | 8354.24 | 178.05 | 339.66 | 517.71 | 2504.40 | 3345.45 | 5849.84 | 2682.45 | 3685.11 | 6367.56 | 1510.86 | 1520.55 | 3031.41 |
| 4 | 2022-23 | 5451.85 | 4914.49 | 10366.34 | 1171.59 | 2164.55 | 3336.15 | 2725.93 | 4914.49 | 7640.41 | 3897.52 | 7079.04 | 10976.56 | 3102.62 | 3331.73 | 6434.34 |
| 5 | 2023-24 | 12623.37 | 6309.73 | 18933.10 | 794.90 | 3747.31 | 4542.21 | 4966.62 | 6309.73 | 11276.35 | 5761.52 | 10057.04 | 15818.57 | 5761.52 | 6525.09 | 12286.61 |
| 6 | 2024-25 | 3804.41 | 7603.00 | 11407.41 | 0.00 | 3531.96 | 3531.96 | 570.66 | 7602.99 | 8173.65 | 570.66 | 11134.95 | 11705.61 | 570.66 | 10517.15 | 11087.81 |
| 7 | 2025-26 | 5000.00 | 6050.00 | 11050.00 | 0.00 | 617.80 | 617.80 | 0.00 | 5689.43 | 5689.43 | 0.00 | 6307.23 | 6307.23 | 0.00 | 6306.85 | 6306.85 |
| 8 | 206-27 | 8120.30 | 5060.14 | 13180.44 | 0.00 | 0.00 | 0.00 | 196.19 | 1432.52 | 1628.72 | 196.19 | 1432.52 | 1628.72 | 53.03 | 815.81 | 868.84 |
| | ಒಟ್ಟು | **41744.19** | **34202.93** | **75947.12** | | | | **11958.21** | **30193.80** | **42150.01** | **11982.82** | **30364.31** | **42347.12** | **11839.65** | **29747.21** | **41586.86** |

ಕೇಂದ್ರ ಸರ್ಕಾರದ ಅನುದಾನ ಬಿಡುಗಡೆಯನ್ನು ನೀರೀಕ್ಷಿಸಿ, ರಾಜ್ಯ ಸರ್ಕಾರವು ಒಟ್ಟು ರೂ.16,852.48 ಕೋಟಿಗಳನ್ನು ಮುಂಗಡವಾಗಿ ಬಿಡುಗಡೆ ಮಾಡಿದೆ. ಈ ಮುಂಗಡ ಅನುದಾನವನ್ನು ಮಾರ್ಗಸೂಚಿಯಲ್ಲಿನ ಅನುಪಾತದಂತೆ ಹೊಂದಾಣಿಕೆ ಮಾಡಲು ಕೇಂದ್ರ ಸರ್ಕಾರದ ಒಟ್ಟು ರೂ.8534.98 ಕೋಟಿಗಳ (ಕೇಂದ್ರ ಸರ್ಕಾರದಿಂದ reimbursement ಆದ ರೂ.795.75 ಕೋಟಿಗಳನ್ನು ಒರತುಪಡಿಸಿ) ಅನುದಾನದ ಅವಶ್ಯಕತೆ ಇರುತ್ತದೆ.

# ಅನುಬಂಧ-2

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | ಕಲಬುರಗಿ | ಡಿಎಮ್‌ಎಫ್ (DMF) ಅಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿ | ಕಲಬುರಗಿ ತಾಲ್ಲೂಕಿನ ಅಫ್ಜಲ್‌ಪುರ ವಿಧಾನಸಭಾ ಕ್ಷೇತ್ರದಲ್ಲಿ ಜಲ ಜೀವನ್ ಮಿಷನ್ (JJM) ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 25.06.2024 ರಂದು ಸ್ಥಳ ಪರಿಶೀಲನ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್,ವೃತ್ತ ಕಲಬುರಗಿ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ ಎಂದು ವರದಿಯಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 2 | ಕಲಬುರಗಿ | ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ 224 ಮನೆಗಳಿಗೆ ಮನೆ ಮನೆಗೆ ನಳ ಸಂಪರ್ಕ (FHTC) ಒದಗಿಸುವುದು. | ಕಲಬುರಗಿ ಜಿಲ್ಲೆಯ ಆಲಂದ ತಾಲ್ಲೂಕಿನಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.07.2024 ರಂದು ಸ್ಥಳ ಪರಿಶೀಲನ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್,ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 3 | ಕಲಬುರಗಿ | ಚಿಂಚೋಳಿ ತಾಲ್ಲೂಕಿನ ಹೋಸಳ್ಳಿ ಗ್ರಾಮದ ಹೋಸಳ್ಳಿ ವಾಸಸ್ಥಳದಲ್ಲಿ ಪಿಡಬ್ಲ್ಯೂ ಎಸ್ ಯೋಜನೆಯ ಮೂಲಕ 384 ಮನೆಗಳಿಗೆ FHTC ಒದಗಿಸುವುದು. | ಕಲಬುರಗಿ ಜಿಲ್ಲೆಯ ಕಲಗಿ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 31.05.2024 ರಂದು ಸ್ಥಳ ಪರಿಶೀಲನ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 4 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮುಟ್ಟಲ್ ಗ್ರಾಮದ ವಿವಿಧ ವಾಸಸ್ಥಳಗಳಲ್ಲಿ (Hirebidnal–280, Honnahunasi–185, Bedavatti–256, Chenduru–246, Yediyapur–450, Kadralli–235, Muttal–130 ಮನೆಗಳಿಗೆ) FHTC ಒದಗಿಸುವುದು. | ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಚಂದೂರ ಗ್ರಾಮದಲ್ಲಿ JJM ಅಡಿಯಲ್ಲಿ ನಡೆದ ಕುಡಿಯುವ ನೀರಿನ ಯೋಜನಾ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 31.05.2024 ರಂದು ಸ್ಥಳ ಪರಿಶೀಲನ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಸ್ಥಳ ಪರಿಶೀಲನೆ ನಡೆಸಿ, ಸ್ಥಳದಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 5 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಚಿಕ್ಕಬೆನಕಲ್ ಹಾಗೂ ಇತರ 61 ವಾಸಸ್ಥಳಗಳಿಗೆ ಕುಡಿಯುವ ನೀರು ಒದಗಿಸುವ ಬಹುಗ್ರಾಮ ನೀರು ಸರಬರಾಜು ಯೋಜನೆ (MVS). | ಕೊಪ್ಪಳ ಜಿಲ್ಲೆಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 09.07.2024 ರಂದು ಸ್ಥಳ ಪರಿಶೀಲನ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 6 | ಬೀದರ್ | ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ 300 ಮನೆಗಳಿಗೆ FHTC ಒದಗಿಸುವುದು. | ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಕಠಳ್ಳಿ ಗ್ರಾಮದಲ್ಲಿ JJM ಅಡಿಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಯೋಜನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಅಧೀಕ್ಷಕ ಇಂಜಿನಿಯರ್ ಅವರು 31.10.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ, ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 7 | ಬೀದರ್ | ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಕೋಲಾರ (ಬಿ) ಗ್ರಾಮದಲ್ಲಿ 428 ಮನೆಗಳಿಗೆ FHTC ಒದಗಿಸುವುದು. | ಬೀದರ್ ತಾಲ್ಲೂಕಿನ ಕೋಲಾರ್ (ಬಿ) ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಅಧೀಕ್ಷಕ ಇಂಜಿನಿಯರ್ ಅವರು 31.10.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 8 | ಯಾದಗಿರಿ | ಯಾದಗಿರಿ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಮಲ್ಲಾ (ಬಿ) ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 291 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ನಾಮಲಾಬಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ JJM ಅಡಿಯಲ್ಲಿ ನಡೆದ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್, ಯಾದಗಿರಿ ಅವರು 25.06.2024 ರಂದು ಕಾರ್ಯನಿರ್ವಾಹಕ ಇಂಜಿನಿಯರ್, ಜಿಲ್ಲಾ ಪಂಚಾಯತ್ ಅವರಿಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದರು. ಈ ಮಧ್ಯದಲ್ಲಿ, ಅಧೀಕ್ಷಕ ಇಂಜಿನಿಯರ್ ವೃತ್ತ ಕಲಬುರಗಿ ಅವರು 03.11.2025 ರಂದು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 9 | ಯಾದಗಿರಿ | ಯಾದಗಿರಿ ತಾಲ್ಲೂಕಿನ ಹಟ್ಟಿಕುಣಿ ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 980 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ಜಿಲ್ಲೆಯ ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಹಟ್ಟಿಕುಣಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ JJM ಅಡಿಯಲ್ಲಿ ನಡೆದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು ಹಾಗೂ ಶಿಸ್ತು ಕ್ರಮ ಕೈಗೊಳ್ಳುವಂತೆ ವಿನಂತಿ. | | |
| 10 | ಯಾದಗಿರಿ | ಯಾದಗಿರಿ ತಾಲ್ಲೂಕಿನ ತುರಕನಾದೊಡ್ಡಿ ಗ್ರಾಮದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 224 ಮನೆಗಳಿಗೆ FHTC ಒದಗಿಸುವುದು. | ಗುರುಮಠಕಲ್ ತಾಲ್ಲೂಕಿನ ಅಜಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ತುರಕನದೊಡ್ಡಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಪರಿಶೀಲಿಸಲು 05.08.2024 ರಂದು ತನಿಖಾ ತಂಡವನ್ನು ರಚಿಸಲಾಯಿತು ಮತ್ತು ತಂಡವು 24.10.2024 ರಂದು ವರದಿಯನ್ನು ಸಲ್ಲಿಸಿತು. | ತನಿಖಾ ತಂಡ ಸಲ್ಲಿಸಿದ ವರದಿ ಪ್ರಕಾರ, ಕೆಲವು ಕಾಮಗಾರಿಗಳ ಅನುಷ್ಠಾನದಲ್ಲಿ ಲೋಪಗಳು ಕಂಡುಬಂದಿರುತ್ತವೆ. ಅದರಂತೆ 28.04.2025 ಹಾಗೂ 13.08.2025 ರಂದು ಸಿಇಒ, ಜಿಲ್ಲಾ ಪಂಚಾಯತ್, ಯಾದಗಿರಿ ಅವರಿಗೆ ಸಂಬಂಧಿಸಿದ ಇಂಜಿನಿಯರ್‌ಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ನೋಟಿಸ್ ನೀಡಲು, ಲಿಖಿತ ವಿವರಣೆ ಪಡೆಯಲು ಹಾಗೂ ಛಾಯಾಚಿತ್ರಗಳೊಂದಿಗೆ ವಿವರವಾದ ವರದಿ ಸಲ್ಲಿಸಲು ಪತ್ರ ನೀಡಲಾಗಿದೆ.ಅಂತಿಮ ವರದಿಯನ್ನು ಸ್ವೀಕರಿಸಲಾಗಿದೆ,ತನಿಖೆ ಪ್ರಗತಿಯಲ್ಲಿದೆ. |
| 11 | ಯಾದಗಿರಿ | ಯಾದಗಿರಿ ಜಿಲ್ಲೆಯ ಯರ್ಗೋಳ ಗ್ರಾಮದ ಯರ್ಗೋಳ ವಾಸಸ್ಥಳದಲ್ಲಿ ಎಸ್‌ವಿಎಸ್ ವಿಸ್ತರಣೆ ಮೂಲಕ 1780 ಮನೆಗಳಿಗೆ FHTC ಒದಗಿಸುವುದು. | ಯಾದಗಿರಿ ತಾಲ್ಲೂಕಿನ ಎರ್ಗೋಳ ಗ್ರಾಮದಲ್ಲಿ JJM ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | | |
| 12 | ರಾಯಚೂರು | ರಾಯಚೂರು ತಾಲ್ಲೂಕಿನ ದೇವನಪಲ್ಲಿ ಗ್ರಾಮಕ್ಕೆ FHTC ಒದಗಿಸುವುದು. | ರಾಯಚೂರು ತಾಲ್ಲೂಕಿನ ದೇವನಪಳ್ಳಿ ಗ್ರಾಮದಲ್ಲಿ ಪ್ರಧಾನಮಂತ್ರಿ ಯೋಜನೆ (2022–23) ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.12.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್,ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 13 | ರಾಯಚೂರು | ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ, ಮಾನ್ವಿ, ಲಿಂಗಸುಗೂರು ಹಾಗೂ ಸಿಂಧನೂರು ತಾಲ್ಲೂಕುಗಳಿಗೆ FHTC ಒದಗಿಸುವುದು. | ರಾಯಚೂರು ಜಿಲ್ಲೆಯಲ್ಲಿ JJM ಅಡಿಯಲ್ಲಿ ಜಾರಿಗೆ ತಂದ ಕುಡಿಯುವ ನೀರಿನ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 22.08.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ಪ್ರಕರಣವು ಲೋಕಾಯುಕ್ತರ ಬಳಿ ವಿಚಾರಣೆಯಲ್ಲಿದೆ,ವರದಿ ಇನ್ನೂ ನಿರೀಕ್ಷೆಯಲ್ಲಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 14 | ರಾಯಚೂರು | ರಾಯಚೂರು ಜಿಲ್ಲೆಯ 1406 ಗ್ರಾಮೀಣ ವಾಸಸ್ಥಳಗಳು ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ. | ರಾಯಚೂರು ಜಿಲ್ಲೆಯಲ್ಲಿ ಜಾರಿಗೆ ತಂದ MVS OBOT ಯೋಜನೆಗೆ ಸಂಬಂಧಿಸಿದ ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 16.06.2023 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ತನಿಖೆಗೆ ನೇಮಿಸಲಾದ ಎಸ್‌ಕ್ಯೂಎಂ ಅವರಿಂದ ಪಡೆದ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 15 | ರಾಯಚೂರು | ರಾಯಚೂರು ತಾಲ್ಲೂಕಿನ ವಿವಿಧ ಗ್ರಾಮಗಳಿಗೆ FHTC ಒದಗಿಸುವುದು. | ರಾಯಚೂರು ತಾಲ್ಲೂಕಿನಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.06.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |
| 16 | ವಿಜಯನಗರ | ವಿಜಯನಗರ ಜಿಲ್ಲೆಯ ಕಮಲಾಪುರ ತಾಲ್ಲೂಕಿನಲ್ಲಿ ಜಲ್ ಜೀವನ್ ಮಿಷನ್ (JJM) ಕಾಮಗಾರಿಗಳು. | ವಿಜಯನಗರ ಜಿಲ್ಲೆಯ ಕಮಲಾಪುರ ತಾಲ್ಲೂಕಿನಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 30.09.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ದೂರು ಕಲಬುರಗಿ ಜಿಲ್ಲೆಗೆ ಸಂಬಂಧಿಸಿರುವುದರಿಂದ, ಅಧೀಕ್ಷಕ ಇಂಜಿನಿಯರ್, ವೃತ್ತ ಕಲಬುರಗಿ ರವರು ಪರಿಶೀಲನೆ ನಡೆಸಿ, ಮಾಡಿದ ಕೆಲಸ ತೃಪ್ತಿಕರವಾಗಿದೆ ಎಂದು ವರದಿ ಮಾಡಿದ್ದಾರೆ. ಆದ್ದರಿಂದ, ದೂರನ್ನು ಕೈಬಿಡಲಾಗಿದೆ. |
| 17 | ವಿಜಯನಗರ | ವಿಜಯನಗರ ಜಿಲ್ಲೆಯ ಕುಡ್ಲಿಗಿ ತಾಲ್ಲೂಕಿನಲ್ಲಿ ಪಾವಗಡಾ ಎಂವಿಎಸ್ ಯೋಜನೆಯ ಮೂಲಕ ಚಿನ್ನನಹಳ್ಳಿ (344), ಹರಕನಹಾಲು (236), ಹಿರೆವಡ್ಡನಹಳ್ಳಿ (155), ನಡುಮವಿನಹಳ್ಳಿ (133) ಮನೆಗಳಿಗೆ FHTC ಒದಗಿಸುವುದು. | ವಿಜಯನಗರ ಜಿಲ್ಲೆಯ ಕಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡುಮಾವಿನಹಳ್ಳಿ, ಹಿರವಡ್ಡೇರಹಳ್ಳಿ ಮತ್ತು ಚಿನಹಳ್ಳಿ ಗ್ರಾಮಗಳಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 30.09.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ವಲಯ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 18 | ವಿಜಯನಗರ | ವಿಜಯನಗರ ಜಿಲ್ಲೆಯ ಕುಡ್ಲಿಗಿ ತಾಲ್ಲೂಕಿನ ಕಲಾಪುರ ಗ್ರಾಮದ ಚಿನ್ನನಹಳ್ಳಿ (344), ಹರಕನಹಾಲು (236), ಹಿರೆವಡ್ಡನಹಳ್ಳಿ (155) ಹಾಗೂ ನಡುಮವಿನಹಳ್ಳಿ (133) ವಾಸಸ್ಥಳಗಳಲ್ಲಿ ಪಾವಗಡಾ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ ಮನೆ ಮನೆಗೆ ನಳ ಸಂಪರ್ಕ (FHTC) ಒದಗಿಸುವುದು. | ಕೊಟ್ಟೂರು ತಾಲ್ಲೂಕಿನ ಕಲಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ನಡುಮಾವಿನಹಳ್ಳಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 21.10.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರು ಕಾಮಗಾರಿಯನ್ನು ಪರಿಶೀಲಿಸಿ ವರದಿ ಸಲ್ಲಿಸಿದ್ದಾರೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ವಲಯ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರುನ್ನು ಕೈಬಿಡಲಾಗಿದೆ. |
| 19 | ವಿಜಯನಗರ | ಹಡಗಲಿ ಉಪವಿಭಾಗ ಕಚೇರಿಯಿಂದ ಅನುಷ್ಠಾನಗೊಳಿಸಲಾದ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ಹಡಗಲಿ ಉಪವಿಭಾಗ ಕಚೇರಿ ಮೂಲಕ ಜಾರಿಗೆ ತಂದ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಸಿಇಒ, ಜಿಲ್ಲಾ ಪಂಚಾಯತ್ ಅವರಿಗೆ 26.06.2024 ರಂದು ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನಿರ್ದೇಶನ ನೀಡಲಾಗಿತ್ತು. ಸಿಇಒ ವರದಿ ಇನ್ನೂ ನಿರೀಕ್ಷೆಯಲ್ಲಿದೆ. ಈ ಮಧ್ಯದಲ್ಲಿ ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ಅವರಿಗೆ ಕಾಮಗಾರಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 20 | ವಿಜಯನಗರ | ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸೊನ್ನಾ ಗ್ರಾಮದ ಸೊನ್ನಾ (1450) ಹಾಗೂ ಮೊರಗೇರ ಗ್ರಾಮದಲ್ಲಿ (1274) ಮನಗಳಿಗೆ ಸೊನ್ನಾ–ಬಸರಕೋಡು ಹಾಗೂ ಇತರ 49 ಗ್ರಾಮಗಳಿಗೆ ಸಂಬಂಧಿಸಿದ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ FHTC ಒದಗಿಸುವುದು (ಇಂಡೆಂಟ್ ಸಂಖ್ಯೆ: 33853/ಕಾಲ್–2). | ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮೊರಿಗೇರಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 25.07.2024 ರಂದು ಅಧೀಕ್ಷಕ ಇಂಜಿನಿಯರ್,ವೃತ್ತ ಬಳ್ಳಾರಿ, ಅವರಿಗೆ ವಿಷಯವನ್ನು ಮುನ್ನಡಿಸಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬಳ್ಳಾರಿ ವಲಯ ಅವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ತೃಪ್ತಿಕರವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 21 | ತುಮಕೂರು | ತುಮಕೂರು ಜಿಲ್ಲೆಯ ತುರವೇಕರೆ ತಾಲ್ಲೂಕಿನ ಮುನಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಗೊಟ್ಟಿಕೇರ ಗ್ರಾಮದ ಗೊಟ್ಟಿಕೇರ ಪಾಳ್ಯ ವಾಸಸ್ಥಳದಲ್ಲಿ 96 ಮನೆಗಳಿಗೆ ಎಸ್‌ವಿಎಸ್ ವಿಸ್ತರಣೆ ಮತ್ತು ರಿಟ್ರೋಫಿಟಿಂಗ್ ಮೂಲಕ FHTC ಒದಗಿಸುವುದು. | ತುರುವೇಕೆರೆ ತಾಲ್ಲೂಕಿನ ಗೊಟ್ಟಿಕೇರ ಪಾಳ್ಯದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ರಚಿಸಲಾದ ತನಿಖಾ ತಂಡದಿಂದ ದೂರಿನ ಪರಿಶೀಲನೆ ನಡೆಯುತ್ತಿದೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 22 | ತುಮಕೂರು | ತುರವೇಕರೆ ವಿಧಾನಸಭಾ ಕ್ಷೇತ್ರದ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಾದ್ಯಂತ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ರಚಿಸಲಾದ ತನಿಖಾ ತಂಡದಿಂದ ದೂರಿನ ಪರಿಶೀಲನೆ ನಡೆಯುತ್ತಿದೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 23 | ತುಮಕೂರು | ತುಮಕೂರು ಜಿಲ್ಲೆಯಾದ್ಯಂತ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ತುಮಕೂರು ಜಿಲ್ಲೆಯಾದ್ಯಂತ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ರಚಿಸಲಾದ ತನಿಖಾ ತಂಡದಿಂದ ದೂರಿನ ಪರಿಶೀಲನೆ ನಡೆಯುತ್ತಿದೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 24 | ತುಮಕೂರು | ತುರವೇಕರೆ ತಾಲ್ಲೂಕಿನ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ತುರುವೇಕೆರೆ ತಾಲ್ಲೂಕಿನಲ್ಲಿ ಜಾರಿಗೆ ತಂದ JJM ಕಾಮಗಾರಿಗಳು ಸಮರ್ಪಕವಾಗಿ ಕಾರ್ಯಗತಗೊಳಿಸಲ್ಪಟ್ಟಿಲ್ಲ ಎಂಬ ಕುರಿತು ದೂರು. | ರಚಿಸಲಾದ ತನಿಖಾ ತಂಡದಿಂದ ದೂರಿನ ಪರಿಶೀಲನೆ ನಡೆಯುತ್ತಿದೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 25 | ತುಮಕೂರು | ತುಮಕೂರು ಜಿಲ್ಲೆಯ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ಶಿವಮೊಗ್ಗ ತಾಲ್ಲೂಕಿನ ಬುಲ್ಲಾಪುರ ಹಾಗೂ ಇತರೆ 17 ಗ್ರಾಮಗಳಲ್ಲಿ ಜಾರಿಗೆ ತಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ತನಿಖಾ ತಂಡವನ್ನು ರಚಿಸಲಾಗಿದ್ದು, ನಂತರ ಇಲಾಖಾ ತನಿಖೆಯನ್ನು ಕೈಗೊಳ್ಳಲಾಗುತ್ತಿದೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 26 | ಶಿವಮೊಗ್ಗ | ಶಿವಮೊಗ್ಗ ತಾಲ್ಲೂಕಿನ ಬುಲ್ಲಾಪುರ ಹಾಗೂ ಇತರ 17 ಗ್ರಾಮಗಳಲ್ಲಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ. | ದಾವಣಗೆರೆ ತಾಲ್ಲೂಕಿನ ಹೊನ್ನನಾಯಕನಹಳ್ಳಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 28.06.2024 ರಂದು ಜಿಲ್ಲಾ ಪಂಚಾಯತ್‌ನ ಡಿಎಸ್ ಹಾಗೂ ಪಿಆರ್‌ಇಡಿ, ಶಿವಮೊಗ್ಗದ ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಂದ ಸ್ಥಳ ಪರಿಶೀಲನೆ ನಡೆಸಲಾಗಿದೆ. | ವರದಿ ಪ್ರಕಾರ, ಪೈಪ್‌ಗಳ ಗುಣಮಟ್ಟ ತೃಪ್ತಿಕರವಾಗಿದೆ. ಆದರೆ ನೀರಿನ ಗುಣಮಟ್ಟ ತೃಪ್ತಿಕರವಾಗಿಲ್ಲ. ಆದ್ದರಿಂದ ಪರ್ಯಾಯ ಮೂಲವನ್ನು ಪರಿಗಣಿಸಲಾಗುತ್ತಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 27 | ದಾವಣಗೆರೆ | ದಾವಣಗೆರೆ ತಾಲ್ಲೂಕಿನ ಹೊನ್ನನಾಯಕನಹಳ್ಳಿ ಗ್ರಾಮಕ್ಕೆ ಏಕಗ್ರಾಮ ನೀರು ಸರಬರಾಜು ಯೋಜನೆ (SVS). | ಬಮ್ಮನಸೋಗಿ ಗ್ರಾಮದಲ್ಲಿ JJM ಅಡಿಯಲ್ಲಿ ತಪ್ಪಾದ ಅಂದಾಜು ತಯಾರಿಸಿದ ಕುರಿತು ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ದೂರು ಸಲ್ಲಿಸಲಾಗಿದ್ದು, ಅಮಾನತು ಹಾಗೂ ಇಲಾಖಾ ತನಿಖೆ ನಡೆಸುವಂತೆ ವಿನಂತಿಸಲಾಗಿದೆ. | 30.10.2025 ರಂದು ಸ್ಥಳ ಪರಿಶೀಲನೆಗಾಗಿ ಅಧೀಕ್ಷಕ ಇಂಜಿನಿಯರ್, ವೃತ್ತ ದಾವಣಗೆರೆ ಅವರಿಗೆ ಪತ್ರವನ್ನು ಕಳುಹಿಸಲಾಗಿದೆ. | ಅಧೀಕ್ಷಕ ಇಂಜಿನಿಯರ್ ಅವರು 01.11.2025 ರಂದು ಕಾಮಗಾರಿ ಪರಿಶೀಲನೆ ನಡೆಸಿ ಕಾಂಕ್ರೀಟ್‌ನ ಬಲವನ್ನು ದೃಢೀಕರಿಸಿದ್ದಾರೆ. ಅಂತಿಮ ವರದಿ ಇನ್ನೂ ನಿರೀಕ್ಷೆಯಲ್ಲಿದೆ. |
| 28 | ವಿಜಯಪುರ | ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಬೊಮ್ಮಣಜೋಗಿ ಗ್ರಾಮದ ವಾಸಸ್ಥಳದಲ್ಲಿ ಕನ್ನೊಳ್ಳಿ ಹಾಗೂ ಇತರ 10 ಗ್ರಾಮಗಳ ಮೂಲಕ (55 LPCD) 1183 ಮನೆಗಳಿಗೆ FHTC ಒದಗಿಸುವುದು. | ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ರಾಂಪುರ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 07.12.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ವಿಜಯಪುರ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ, ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದ್ದು ಅಂದಾಜು ಪ್ರಕಾರ ವೈಜ್ಞಾನಿಕವಾಗಿ ಕೈಗೊಳ್ಳಲಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 29 | ವಿಜಯಪುರ | ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ, ಇಂಡಿ ಹಾಗೂ ವಿಜಯಪುರ ತಾಲ್ಲೂಕಿನ 702 ಗ್ರಾಮೀಣ ವಾಸಸ್ಥಳಗಳು ಮತ್ತು 5 ನಗರ ಸ್ಥಳೀಯ ಸಂಸ್ಥೆಗಳಿಗೆ ಬಹುಗ್ರಾಮ ನೀರು ಸರಬರಾಜು ಯೋಜನೆಯಡಿ DBOT ಮಾದರಿಯಲ್ಲಿ ಕುಡಿಯುವ ನೀರು ಸರಬರಾಜು ಸೌಲಭ್ಯಗಳನ್ನು ಅನುಷ್ಠಾನಗೊಳಿಸುವುದು. | ಬೆಳಗಾವಿ ತಾಲ್ಲೂಕಿನ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 09.09.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ವಿಜಯಪುರ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 30 | ವಿಜಯಪುರ | ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ರಾಂಪುರ ಗ್ರಾಮದ ರಾಂಪುರ ಪಾಳ್ಯ ವಾಸಸ್ಥಳದಲ್ಲಿ 745 ಮನೆಗಳಿಗೆ (39 ಮನೆಗಳ ರಿಟ್ರೋಫಿಟಿಂಗ್ ಸೇರಿ) ಎಸ್‌ವಿಎಸ್ ವ್ಯಾಪ್ತಿಯಲ್ಲಿ FHTC ಒದಗಿಸುವುದು. | ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | ಜಲ್ ಜೀವನ್ ಮಿಷನ್ ಯೋಜನೆಯಡಿ ಕಳಪೆ ಮಟ್ಟದ ಕಾಮಗಾರಿ ನಿರ್ವಹಣೆ ಕುರಿತು ತನಿಖೆ ನಡೆಸಲು 31.12.2024 ರಂದು ತಂಡ ರಚಿಸುವ ಆದೇಶ ಹೊರಡಿಸಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 31 | ಬೆಳಗಾವಿ | ಬೆಳಗಾವಿ ತಾಲ್ಲೂಕಿನ ಗ್ರಾಮಗಳಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳು. | ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಸವದತ್ತಿ ಹಾಗೂ ಹಿಂಡಲಗಿ ಗ್ರಾಮಗಳಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 22.06.2023 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 32 | ಬಾಗಲಕೋಟೆ | ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲ್ಲೂಕಿನ ಆರ್‌ಸಿ ಗ್ರಾಮಕ್ಕೆ ವಿತರಣೆ ಮತ್ತು ರೈಜಿಂಗ್ ಮೇನ್‌ಗೆ ಮನೆ ಸಂಪರ್ಕ ಒದಗಿಸುವುದು (ಹೇರಕಲ್ ಆರ್‌ಸಿ – NRDWP–SDP ಅಡಿಯಲ್ಲಿ), ಹಾಗೂ ಅರಕೇರಿ (500 ಮನೆಗಳು) ಮತ್ತು ಹಗ್ಗೂರು ಆರ್‌ಸಿ (820 ಮನೆಗಳು) ಗ್ರಾಮಗಳಲ್ಲಿ ಎಂವಿಎಸ್ ಯೋಜನೆಯ ಮೂಲಕ FHTC ಒದಗಿಸುವುದು (JJM–2020–21). | ರಬಕವಿ-ಬನಹಟ್ಟಿ ತಾಲ್ಲೂಕಿನ ಕುಲಹಳ್ಳಿ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 08.05.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ, ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 33 | ಬಾಗಲಕೋಟೆ | ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲ್ಲೂಕಿನ ನಾಗರಾಳ ಗ್ರಾಮದ ನಾಗರಾಳ ವಾಸಸ್ಥಳದಲ್ಲಿ ತೆಗ್ಗಿ ಹಾಗೂ ಇತರ 8 ಗ್ರಾಮಗಳ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ 1150 ಮನೆಗಳಿಗೆ FHTC ಒದಗಿಸುವುದು. | ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಮಹಾದೇವಕೊಪ್ಪ ಗ್ರಾಮದಲ್ಲಿ JJM ಕಾಮಗಾರಿಗಳ ಅನುಷ್ಠಾನದಲ್ಲಿ ಅಧಿಕಾರಿಗಳಿಂದ ನಡೆದ ಲೋಪದೋಷಗಳ ಕುರಿತು ತನಿಖೆ ನಡೆಸುವಂತೆ ವಿನಂತಿ. | 19.01.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ, ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| | ಬಾಗಲಕೋಟೆ | | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬಾಡ್ ಗ್ರಾಮದಲ್ಲಿ JJM ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 12.09.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಅವರಿಗೆ ಪತ್ರ ನೀಡಲಾಗಿದೆ. | |
| 34 | ಬೆಳಗಾವಿ | ಬೆಳಗಾವಿ ಜಿಲ್ಲೆಯ ಸಾವದತ್ತಿ ತಾಲ್ಲೂಕಿನ ಸಾವದತ್ತಿ ಹಾಗೂ ಶಿಂದೋಗಿ ಗ್ರಾಮಗಳಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳು. | ಅಥಣಿ ತಾಲ್ಲೂಕಿನಲ್ಲಿ JJM ಅಡಿಯಲ್ಲಿ ನಡೆದ ಕಾಮಗಾರಿಗಳ ಗುಣಮಟ್ಟ ಕಳಪೆಯಾಗಿರುವ ಕುರಿತು ದೂರು. | 03.03.2023 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 35 | ಬಾಗಲಕೋಟೆ | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕುಲ್ಲಹಳ್ಳಿ ಗ್ರಾಮದ ಕುಲ್ಲಹಳ್ಳಿ ವಾಸಸ್ಥಳದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 938 ಮನೆಗಳಿಗೆ FHTC ಒದಗಿಸುವುದು. | ರಬಕವಿ-ಬನಹಟ್ಟಿ ತಾಲೂಕು ಕುಲಹಳ್ಳಿ ಗ್ರಾಮದ ಜೆಜೆಎಂ ಕಾಮಗಾರಿ ಕಳಪೆಯಾಗಿರುವ ಬಗ್ಗೆ ದೂರು. | 12.09.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ , ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 36 | ಉತ್ತರ ಕನ್ನಡ | ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಮಹಾದೇವಕೊಪ್ಪ ಗ್ರಾಮದಲ್ಲಿ ಜಲ್ ಜೀವನ್ ಮಿಷನ್ ಕಾಮಗಾರಿ. | ಕಳಪೆ ಜೆಜೆಎಂ ಕಾಮಗಾರಿಯ ತನಿಖೆಗೆ ಮನವಿ ಯಲ್ಲಾಪುರ ತಾಲ್ಲೂಕಿನ ಮಹದೇವಕೊಪ್ಪ ಗ್ರಾಮದಲ್ಲಿ ಅಧಿಕಾರಿಗಳಿಂದ ಕಾಮಗಾರಿ ಅನುಷ್ಠಾನ | 16.03.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಅವರಿಗೆ ಪತ್ರ ನೀಡಲಾಗಿದೆ. | ವರದಿ ಇನ್ನೂ ನಿರೀಕ್ಷೆಯಲ್ಲಿದೆ. |
| 37 | ಗದಗ | ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಕಲಸಾಪುರ (1039 ಮನೆಗಳು) ಮತ್ತು ಬೆಳದಡಿ (572 ಮನೆಗಳು) ವಾಸಸ್ಥಳಗಳಲ್ಲಿ DBOT ಮಾದರಿಯ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ FHTC ಒದಗಿಸುವುದು. | (1) ಗದಗ ಜಿಲ್ಲೆಯ ಗದಗ ತಾಲೂಕಿನ ಕಳಸಾಪುರ ಗ್ರಾಮದ ಕಳಸಾಪುರ ಆವಾಸಸ್ಥಾನದಲ್ಲಿರುವ 1039 ಮನೆಗಳಿಗೆ MVS ನ DBOT ಮೂಲಕ ಗದಗ ಜಿಲ್ಲೆಯ ಗದಗ, ಮುಂಡರಗಿ, ಶಿರಹಟ್ಟಿ ತಾಲೂಕಿನ ಎಲ್ಲಾ ವಾಸಸ್ಥಳಗಳಿಗೆ FHTC ಒದಗಿಸುವುದು.<br>(2) ಗದಗ ಜಿಲ್ಲೆಯ ಗದಗ ತಾಲೂಕಿನ ಬೆಳದಡಿ ಗ್ರಾಮದ ಬೆಳದಡಿ ಆವಾಸಸ್ಥಾನದಲ್ಲಿರುವ 572 ಮನೆಗಳಿಗೆ MVS ನ DBOT ಮೂಲಕ ಗದಗ ಜಿಲ್ಲೆಯ ಗದಗ, ಮುಂಡರಗಿ, ಶಿರಹಟ್ಟಿ ತಾಲೂಕಿನ ಎಲ್ಲಾ ವಾಸಸ್ಥಳಗಳಿಗೆ FHTC ಒದಗಿಸುವುದು" | 27.05.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಗದಗ ಅವರಿಗೆ ಪತ್ರ ನೀಡಲಾಗಿದೆ. | 03.11.2025 ರಂದು ಅಧೀಕ್ಷಕ ಇಂಜಿನಿಯರ್,ವೃತ್ತ ಧಾರವಾಡ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 38 | ಧಾರವಾಡ | ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಹಿರೇಹೊನ್ನಳ್ಳಿ (794), ಡಿ. ಬಸವನಕೊಪ್ಪ (72), ದಾಸನೂರು (108) ಮತ್ತು ದೇವರಲಿಂಗಿಕೊಪ್ಪ (218) ವಾಸಸ್ಥಳಗಳಲ್ಲಿ ಎಸ್‌ವಿಎಸ್ ವಿಸ್ತರಣೆ ಮೂಲಕ FHTC ಒದಗಿಸುವುದು. | (1) ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಹಿರೇಹೊನ್ನಳ್ಳಿ ಗ್ರಾಮದ ಹಿರೇಹೊನ್ನಳ್ಳಿ ವಾಸದಲ್ಲಿರುವ 794 ಕುಟುಂಬಗಳಿಗೆ SVS ಅನ್ನು ಧಾರವಾಡ ಜಿಲ್ಲೆಯ ಹಿರೇಹೊನ್ನಳ್ಳಿ ಗ್ರಾಮಕ್ಕೆ ಹೆಚ್ಚಿಸುವ ಮೂಲಕ FHTC ಗಳನ್ನು ಒದಗಿಸುವುದು<br>(2) ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಡಿ. ಬಸವನಕೊಪ್ಪ ಗ್ರಾಮದ ಡಿ. ಬಸವನಕೊಪ್ಪ ವಾಸದಲ್ಲಿರುವ 72 ಕುಟುಂಬಗಳಿಗೆ ಎಸ್‌ವಿಎಸ್‌ನಿಂದ ಧಾರವಾಡ ಜಿಲ್ಲೆಯ ಡಿ.ಬಸವನಕೊಪ್ಪ ಗ್ರಾಮಕ್ಕೆ ಎಫ್‌ಎಚ್‌ಟಿಸಿಯನ್ನು ಒದಗಿಸುವುದು.<br>(3) ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ದಾಸನೂರ ಗ್ರಾಮದ ದಾಸನೂರ ವಾಸದಲ್ಲಿರುವ 108 ಕುಟುಂಬಗಳಿಗೆ ಎಫ್‌ಎಚ್‌ಟಿಸಿಗಳನ್ನು ಒದಗಿಸುವುದು, ಧಾರವಾಡ ಜಿಲ್ಲೆಯ ದಾಸನೂರ ಗ್ರಾಮಕ್ಕೆ ಎಸ್‌ವಿಎಸ್ ವರ್ಧನೆ ಮೂಲಕ ಧಾರವಾಡ ಜಿಲ್ಲೆಯ ದೇವರಲಿಂಗಿಕೊಪ್ಪ ಗ್ರಾಮ | 30.08.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಧಾರವಾಡ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್ ವೃತ್ತ ಧಾರವಾಡ ಅವರ ವರದಿ ಪ್ರಕಾರ, ಸಣ್ಣ ಪ್ರಮಾಣದ ದೋಷಗಳನ್ನು ಗುರುತಿಸಲಾಗಿದ್ದು, ಅವುಗಳ ಸರಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 39 | ಬೆಳಗಾವಿ | ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ಬಾಳಿಮಟ್ಟಿ (ಶಿಂದೋಗಿ) ಗ್ರಾಮದ ವಾಸಸ್ಥಳದಲ್ಲಿ ಎಸ್‌ವಿಎಸ್ ಯೋಜನೆಯ ಮೂಲಕ 690 ಮನೆಗಳಿಗೆ FHTC ಒದಗಿಸುವುದು. | ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಸವದತ್ತಿ ಮತ್ತು ಶಿಂದೋಗಿ ಗ್ರಾಮಗಳ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಲ್ಲಿ ಕಳಪೆ ಗುಣಮಟ್ಟದ ಕಾಮಗಾರಿಗಳು. | 03.03.2023 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಕಾಮಗಾರಿ ತೃಪ್ತಿಕರವಾಗಿದ್ದು, ದೂರುದಾರರು ದೂರು ಹಿಂಪಡೆದಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 40 | ಬೆಳಗಾವಿ | ಕಿಣಯೆ ಗ್ರಾಮದಲ್ಲಿ ಪಿಡಬ್ಲ್ಯೂಎಸ್ ವಿಸ್ತರಣೆ, ಸುಳಗಾ ಗ್ರಾಮದಲ್ಲಿ ಓವರ್‌ಹೆಡ್ ಟ್ಯಾಂಕ್ (OHT) ನಿರ್ಮಾಣ, ಹಿಂದಲಗಾ ಮತ್ತು ಯಳ್ಳೂರು ಗ್ರಾಮಗಳಲ್ಲಿ ನೀರು ಸರಬರಾಜು ಯೋಜನೆಗಳ ಪುನಶ್ಚೇತನ, ಬೆಂಕನಹಳ್ಳಿ, ಕಾಕತಿ (SCP) ಮತ್ತು ಮಾಚೆ ಗ್ರಾಮಗಳಲ್ಲಿ ವಿಸ್ತರಣೆ, ಹಿರೇಬಾಗೇವಾಡಿ ಮತ್ತು ಇತರ 2 ಗ್ರಾಮಗಳಲ್ಲಿ ಬಹುಗ್ರಾಮ ನೀರು ಸರಬರಾಜು ಯೋಜನೆಯ ಕಾಮಗಾರಿ/ಪುನಶ್ಚೇತನ ಮತ್ತು ನಿರ್ವಹಣೆ, ಹಾಗೂ ಬೆಳಕುಂದ್ರೀ ಬಿಕೆ (492), ಹೊನಗಾ (845) ಮತ್ತು ಮುಟಗಾ (1241) ಗ್ರಾಮಗಳಲ್ಲಿ FHTC ಒದಗಿಸುವುದು. | ಬೆಳಗಾವಿ ತಾಲ್ಲೂಕಿನ ಗ್ರಾಮಗಳಲ್ಲಿನ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಲ್ಲಿ ಕಳಪೆ ಮಟ್ಟದ ಕಾಮಗಾರಿಗಳು. | 22.06.2023 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್, ವೃತ್ತ ಬೆಳಗಾವಿ ಅವರ ವರದಿ ಪ್ರಕಾರ, ಅನುಮೋದಿತ ಅಂದಾಜಿನಂತೆ ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 41 | ಬೆಳಗಾವಿ | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬಾಡ್ ಗ್ರಾಮದಲ್ಲಿ ಕನಗಾಲಾ ಹಾಗೂ ಇತರ 9 ಗ್ರಾಮಗಳ ಬಹುಗ್ರಾಮ ನೀರು ಸರಬರಾಜು ಯೋಜನೆಯ ಮೂಲಕ (SS LPCO) 574 ಮನೆಗಳಿಗೆ FHTC ಒದಗಿಸುವುದು. | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬಾಡ್ ಗ್ರಾಮದಲ್ಲಿ ಕಳಪೆ ಗುಣಮಟ್ಟದ ಜೆ.ಜೆ.ಎಂ (JJM) ಕಾಮಗಾರಿಗಳು. | 16.07.2024 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ. | ಪ್ರಕರಣವು ಲೋಕಾಯುಕ್ತರ ಬಳಿ ವಿಚಾರಣೆಯಲ್ಲಿದೆ. |
| 42 | ಬೆಳಗಾವಿ | ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶಹಾಪುರ (388) ಹಾಗೂ ಶಿರಗುಪ್ಪಿ (1203) ಗ್ರಾಮಗಳಲ್ಲಿ ಮನೆ ಮನೆಗೆ ನಳ ಸಂಪರ್ಕ (FHTC) ಒದಗಿಸುವುದು. | ಅಥಣಿ ತಾಲ್ಲೂಕಿನ ಜೆ.ಜೆ.ಎಂ ಯೋಜನೆಯಡಿ ನಡೆಯುತ್ತಿರುವ ಕಳಪೆ ಕಾಮಗಾರಿಗಳ ಕುರಿತು ದೂರು. | 13.01.2025 ರಂದು ವರದಿ ಸಲ್ಲಿಸುವಂತೆ ಸಿಇಒ, ಜಿಲ್ಲಾ ಪಂಚಾಯತ್, ಬೆಳಗಾವಿ ಅವರಿಗೆ ಪತ್ರ ನೀಡಲಾಗಿದೆ. | ಅಧೀಕ್ಷಕ ಇಂಜಿನಿಯರ್ ವೃತ್ತ ಬೆಳಗಾವಿ ಅವರು ಅಥಣಿ ತಾಲ್ಲೂಕಿನ 2 ಗ್ರಾಮಗಳಲ್ಲಿ ಪರಿಶೀಲನೆ ನಡೆಸಿದ್ದು, ವರದಿ ಪ್ರಕಾರ ಅನುಮೋದಿತ ಅಂದಾಜಿನಂತೆ ಕಾಮಗಾರಿ ತೃಪ್ತಿಕರವಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |

| ಕ್ರಮ ಸಂಖ್ಯೆ | ಜಿಲ್ಲೆ | ಯೋಜನೆಯ ವಿವರಗಳು | ದೂರಿನ ಕುರಿತು | ಇಲಾಖೆ ಕೈಗೊಂಡ ಕ್ರಮ | ಪ್ರಸ್ತುತ ಸ್ಥಿತಿ |
|---|---|---|---|---|---|
| 43 | ಮೈಸೂರು | ಮೈಸೂರು ಜಿಲ್ಲೆಯ ಪಿರಿಯಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದ ಗೊಸಾಯಿ ಕಾಲೋನಿ ವಾಸಸ್ಥಳದಲ್ಲಿ ಎಸ್‌ವಿಎಸ್ ವಿಸ್ತರಣೆ ಮತ್ತು ರಿಟ್ರೋಫಿಟಿಂಗ್ ಮೂಲಕ 102 ಮನೆಗಳಿಗೆ FHTC ಒದಗಿಸುವುದು. | ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮ ಪಂಚಾಯಿತಿಯ ಡೊಂಗ್ರಿ ಗರಸಿಯ ಕಾಲೋನಿಯಲ್ಲಿ ಜೆ.ಜೆ.ಎಂ ಅಡಿಯಲ್ಲಿನ ಕಳಪೆ ಕುಡಿಯುವ ನೀರಿನ ಯೋಜನಾ ಕಾಮಗಾರಿಗಳಿಂದಾಗಿ ಸುಸ್ಥಿತಿಯಲ್ಲಿದ್ದ ಸಿಸಿ ರಸ್ತೆ ಮತ್ತು ಚರಂಡಿಗಳು ಹಾನಿಗೊಳಗಾಗಿವೆ. ಇದರಿಂದಾಗಿ ನೀರು ನಿಂತು ರೋಗರುಜಿನಗಳು ಹರಡುತ್ತಿವೆ. (02.01.2025 ರಂದು ವಾರ್ತಾ ಭಾರತಿ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ). | 26.03.2025 ರಂದು ಅಧೀಕ್ಷಕ ಇಂಜಿನಿಯರ್,ವೃತ್ತ ಮೈಸೂರು ಹಾಗೂ ಕೇಂದ್ರ ಕಚೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಕಾಮಗಾರಿಯನ್ನು ಪರಿಶೀಲಿಸಿದ್ದಾರೆ. | ರಸ್ತೆ ಪುನಸ್ಥಾಪನೆ ಕಾಮಗಾರಿ ಪೂರ್ಣಗೊಂಡಿದ್ದು, ಚರಂಡಿಯಲ್ಲಿ ನೀರು ನಿಂತಿರುವ ಸಮಸ್ಯೆಯನ್ನು ನಿವಾರಿಸಲಾಗಿದೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 44 | ಕೊಪ್ಪಳ | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ಜಲ್ ಜೀವನ್ ಮಿಷನ್ ಕುಡಿಯುವ ನೀರು ಕಾಮಗಾರಿಗಳು. | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ಜೆ.ಜೆ.ಎಂ ಕುಡಿಯುವ ನೀರಿನ ಕಾಮಗಾರಿಗಳು ಕಳಪೆ ಮತ್ತು ವಿಫಲವಾಗಿರುವ ಬಗ್ಗೆ 31.01.2024 ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದೆ. | ಸಿಇಒ, ಜಿಲ್ಲಾ ಪಂಚಾಯತ್ ಕೊಪ್ಪಳ ರವರಿಂದ ವರದಿ ಕೇಳಲಾಗಿದೆ. | ಸಿಇಒ ಅವರು ಕಾಮಗಾರಿದ ಗುಣಮಟ್ಟ ತೃಪ್ತಿಕರವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 45 | ತುಮಕೂರು | ತುಮಕೂರು ಜಿಲ್ಲೆಯ ಜಲ್ ಜೀವನ್ ಮಿಷನ್ ಕಾಮಗಾರಿಗಳು. | ತುಮಕೂರು ಜಿಲ್ಲೆಯಲ್ಲಿ ಮೆಸರ್ಸ್ ಸಬ್ಬಲ್ ಶ್ರೀ ಅಸೋಸಿಯೇಟ್ಸ್‌ನವರಿಂದ ನಡೆದ ಕಳಪೆ ಗುಣಮಟ್ಟದ ಜೆ.ಜೆ.ಎಂ ಕಾಮಗಾರಿಗಳು. | ಅಧೀಕ್ಷಕ ಇಂಜಿನಿಯರ್ ವೃತ್ತ ಬೆಂಗಳೂರು ಅವರು ಕಾಮಗಾರಿಗಳನ್ನು ಪರಿಶೀಲಿಸಿದ್ದು, 3 ಕಾಮಗಾರಿಗಳನ್ನು ರದ್ದುಗೊಳಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಸೂಚಿಸಿ ವರದಿ ಸಲ್ಲಿಸಲು ನಿರ್ದೇಶನ ನೀಡಿದ್ದಾರೆ. | ಅಧೀಕ್ಷಕ ಇಂಜಿನಿಯರ್, ಬೆಂಗಳೂರು ವೃತ್ತ ರವರು ಸ್ಥಳ ಪರಿಶೀಲನ ನಡೆಸಿ, ಕಾಮಗಾರಿಗಳ ಗುಣಮಟ್ಟ ಉತ್ತಮವಾಗಿದೆ ಎಂದು ವರದಿ ಸಲ್ಲಿಸಿದ್ದಾರೆ. ಆದ್ದರಿಂದ ದೂರನ್ನು ಕೈಬಿಡಲಾಗಿದೆ. |
| 46 | ರಾಯಚೂರು | ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಬಸಾಪುರ ಗ್ರಾಮಕ್ಕೆ FHTC ಒದಗಿಸುವುದು. | ಜೆ.ಜೆ.ಎಂ ಕಾಮಗಾರಿಗಳ ಕಳಪೆ ಗುಣಮಟ್ಟ. | ಅಧೀಕ್ಷಕ ಇಂಜಿನಿಯರ್ ವೃತ್ತ ಬಳ್ಳಾರಿ ಅವರು ಕಾಮಗಾರಿಗಳನ್ನು ಪರಿಶೀಲಿಸಿದ್ದು, 3 ಕಾಮಗಾರಿಗಳನ್ನು ರದ್ದುಗೊಳಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರಿಗೆ ಸೂಚಿಸಿ ವರದಿ ಸಲ್ಲಿಸಲು ನಿರ್ದೇಶನ ನೀಡಿದ್ದಾರೆ. | ಸಂಬಂಧಿಸಿದ ಅಧಿಕಾರಿ ಅಮಾನತುಗೊಳಿಸಲ್ಪಟ್ಟಿದ್ದು, ಇಲಾಖಾ ತನಿಖೆ ಪ್ರಗತಿಯಲ್ಲಿದೆ. |
| 47 | ಕೊಪ್ಪಳ | ಕಳಪೆ ಗುಣಮಟ್ಟದ ಕಾಮಗಾರಿ ನಿರ್ವಹಣೆ | ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನಲ್ಲಿ 2020-21ನೇ ಸಾಲಿನಲ್ಲಿ ಮಂಜೂರಾದ ಜೆಜೆಎಂ (JJM) ಕಾಮಗಾರಿಗಳ ಕಳಪೆ ಗುಣಮಟ್ಟದ ಕುರಿತು | EE ಮತ್ತು AEE ಅವರನ್ನು ಅಮಾನತ್ತಿನಲ್ಲಿಡಲಾಗಿದೆ | ಸಂಬಂಧಿಸಿದ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ. |
| 48 | ತುಮಕೂರು | ಕಲುಷಿತ ಕುಡಿಯುವ ನೀರಿನ ಪೂರೈಕೆ | ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರು ಪೂರೈಕೆ ಕುರಿತು | AEE ಅವರನ್ನು ಅಮಾನತ್ತಿನಲ್ಲಿಡಲಾಗಿದೆ | ಸಂಬಂಧಿಸಿದ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ. |
| 49 | ಮೈಸೂರು | ಕಲುಷಿತ ಕುಡಿಯುವ ನೀರಿನ ಪೂರೈಕೆ | ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ತಗಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಲುಷಿತ ಕುಡಿಯುವ ನೀರು ಸರಬರಾಜು ಕುರಿತು | AEE ಅವರನ್ನು ಅಮಾನತ್ತಿನಲ್ಲಿಡಲಾಗಿದೆ | ಸಂಬಂಧಿಸಿದ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ. |
| 50 | ಕೋಲಾರ | ಕಲುಷಿತ ಕುಡಿಯುವ ನೀರಿನ ಪೂರೈಕೆ | ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಮಿನಜೇನಹಳ್ಳಿ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರು ಪೂರೈಕೆ ಕುರಿತು | AEE ಅವರನ್ನು ಅಮಾನತ್ತಿನಲ್ಲಿಡಲಾಗಿದೆ | ಸಂಬಂಧಿಸಿದ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ. |
| 51 | ಯಾದಗಿರಿ | ಕಲುಷಿತ ಕುಡಿಯುವ ನೀರಿನ ಪೂರೈಕೆ | ಯಾದಗಿರಿ ಜಿಲ್ಲೆಯ ಗುರುಮಠಕಲ್ ವಿಧಾನಸಭಾ ಕ್ಷೇತ್ರದಲ್ಲಿ ಕಲುಷಿತ ಕುಡಿಯುವ ನೀರಿನ ಪೂರೈಕೆ ಕುರಿತು | AEE ಅವರನ್ನು ಅಮಾನತ್ತಿನಲ್ಲಿಡಲಾಗಿದೆ | ಸಂಬಂಧಿಸಿದ ಅಧಿಕಾರಿಯನ್ನು ಅಮಾನತ್ತಿನಲ್ಲಿಡಲಾಗಿದೆ. |